


**SARAYU** - Kannada Monthly Regn. No. KARKAN/2014/62363
**June Vol. : 13 Issue : 1 5128/ ಪರಾಭವ ಸಂವತ್ಸರ ಜೂನ್ 2026 ಪುಟ 4 Rs. 10/-**

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

# ಶ್ರೀರಾಮ ಪದವಿ ವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ - ದೀಪ ಪ್ರದಾನ ಕಾರ್ಯಕ್ರಮ

02.06.2026












ಮಹಾವಿದ್ಯಾಲಯದ 2025–26ನೇ ವರ್ಷದ ಅಂತಿಮ ಪದವಿ ವಿದ್ಯಾರ್ಥಿಗಳ ದೀಪ ಪ್ರದಾನವೆಂಬ ಭಾವಪೂರ್ಣ ಕಾರ್ಯಕ್ರಮ ಆಜಾದ್ ಸಭಾಂಗಣದಲ್ಲಿ ನಡೆಯಿತು.

ಗುಜರಾತಿನ ಸೋಮನಾಥ ಮಂದಿರದ ದೇವಸ್ಥಾನದ ಪುನರ್ನಿರ್ಮಾಣದ 75 ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಅಮೃತ ಮಹೋತ್ಸವವನ್ನು ವಿಶೇಷವಾಗಿ ನೆನಪಿನ ಪ್ರಯುಕ್ತ ಅಂತಿಮ ವರ್ಷದ ವಿದ್ಯಾರ್ಥಿಗಳು ಶಿವಲಿಂಗಕ್ಕೆ ಹಣತೆ ಹಚ್ಚುವ ಮೂಲಕ ಧರ್ಮ, ಸಂಸ್ಕೃತಿ ಹಾಗೂ ಆಧ್ಯಾತ್ಮಿಕ ಮೌಲ್ಯಗಳಿಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ವಿದ್ಯಾಕೇಂದ್ರದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಭಾವೀ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಬೆಳಗುವ ದೀಪ ಕೊಡುವ ಮೂಲಕ ತಮ್ಮ ಜವಾಬ್ದಾರಿಗಳನ್ನು ಹಸ್ತಾಂತರಿಸಿದರು.

ಸಭಾ ಕಾರ್ಯಕ್ರಮದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರೂ ಆದ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಜುವೆಲ್ಲರ್ಸ್ ಅಸೋಸಿಯೇಷನ್ ಬೆಂಗಳೂರು ಇದರ ಅಧ್ಯಕ್ಷ ಹಾಗೂ ಉದ್ಯಮಿ ಡಾ. ಚೇತನ್ ಕುಮಾರ್ ಮೆಹ್ತಾ, ಮಂಗಳೂರಿನ ಖ್ಯಾತ ವೈದ್ಯರೂ ಉದ್ಯಮಿಗಳಾದ ಡಾ. ಪ್ರಕಾಶ್ ಶೆಟ್ಟಿ., ಬೆಂಗಳೂರಿನ ಶೆಲ್ಟರ್ಸ್ & ಬ್ಯುಲ್ಡರ್ಸ್ ಪ್ರೈ. ಲಿ. ಇದರ ಚೆಯರ್ಮನ್ ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ರೂಪೇಶ್ ಕುಮಾರ್, ಇನ್ಸಿಟ್ಯೂಶನ್ ಆಫ್ ಜ್ಯುವೆಲ್ಲರಿ ಸ್ಟಡೀಸ್ ಇದರ ಪ್ರಾಂಶುಪಾಲರಾದ ಪ್ರೊ. ಡಾ. ಸೂರ್ಯ, ವಿದ್ಯಾಕೇಂದ್ರದ ಅಧ್ಯಕ್ಷರು ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರು ಶ್ರೀ ವಸಂತ ಮಾಧವ ಶ್ರೀಮಾನ್, ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಕಾರ್ಯಕರ್ತೆ ಶ್ರೀಮತಿ ಡಾ. ಕಮಲಾ ಪ್ರಭಾಕರ ಭಟ್, ವಿದ್ಯಾಕೇಂದ್ರದ ಸಿಇಒ ಹಾಗೂ ಕಾಲೇಜು ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಉಪಸ್ಥಿತರಿದ್ದರು. ಅಂತಿಮ ಪದವಿ ವಿದ್ಯಾರ್ಥಿಗಳು ತಮ್ಮ ಕೊಡುಗೆಯನ್ನು ವಿದ್ಯಾಸಂಸ್ಥೆಗೆ ನೀಡಿದರು.



## 18 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ (ಆರ್ಮಿ ವಿಂಗ್) ಸಂಯುಕ್ತ ವಾರ್ಷಿಕ ತರಬೇತಿ ಶಿಬಿರ

ದಿನಾಂಕ 05.05.2026 ರಿಂದ 14.05.2026ರವರೆಗೆ 18 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ (ಆರ್ಮಿವಿಂಗ್) ವತಿಯಿಂದ ಸಂಯುಕ್ತ ವಾರ್ಷಿಕ ತರಬೇತಿ ಶಿಬಿರ (CATC) ಅನ್ನು ಮೂಡುಬಿದ್ರೆಯ ಮಹಾವೀರ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 50 ಎನ್‌ಸಿಸಿ ಕೆಡೆಟ್‌ಗಳು ಭಾಗವಹಿಸಿದ್ದು, ಶಿಬಿರದ ಅಂಗವಾಗಿ ಆಯೋಜಿಸಲಾದ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಬಹುಮಾನಗಳನ್ನು ಪಡೆದಿದ್ದಾರೆ. ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಕೆಡೆಟ್‌ಗಳು ಪ್ರಮಾಣಪತ್ರಗಳನ್ನು ಪಡೆದಿರುತ್ತಾರೆ.

## ಸುಭಾಷಿತ ಮಂಜರಿ

ಅನುಭವೇನ ವಿನಾಧಿಗತಂ ಶ್ರುತಂ ಭವತಿ
ನೈವ ನೃಣಾಮುಪಕಾರಕಂ ।
ದಧಿನಿ ವರ್ತತ ಏವ ಹವಿಃ ಪುನಃ
ನ ಮಥನೇನ ವಿನಾ ತದವಾಪ್ಯತೇ ॥

ಓದಿ ಕಲಿತದ್ದಾಗಲಿ ಕೇಳಿ ತಿಳಿದದ್ದಾಗಲಿ ಸ್ವತಃ ಅನುಭವವಿಲ್ಲದೆ ಜನರಿಗೆ ಉಪಯುಕ್ತವಾಗುವುದಿಲ್ಲ. ಮೊಸರಲ್ಲಿ ತುಪ್ಪವೇನೋ ಇರುತ್ತದೆ. ಆದರೆ ಮೊಸರನ್ನು ಕಡೆಯದೆ ಅದು ದೊರಕುವುದಿಲ್ಲ.

### ಸಂಪಾದಕೀಯ

ಮೇ ತಿಂಗಳಲ್ಲಿ ಪದವಿ ಕಾಲೇಜನ್ನು ಹೊರತುಪಡಿಸಿ ಇತರ ವಿಭಾಗಗಳಿಗೆ ಬೇಸಗೆಯ ರಜಾ ದಿನಗಳಾಗಿರುವುದರಿಂದ ಬಹುತೇಕ ವರದಿಗಳು ಪದವಿ ವಿಭಾಗಕ್ಕೆ ಮೀಸಲಾಗಿದೆ. ಈ ಬಾರಿಯ ಸಂಚಿಕೆಯಲ್ಲಿ ನಮ್ಮ ಸಂಸ್ಥೆಯ ವಿದ್ಯಾರ್ಥಿ ಅಗ್ನಿವೀರ್‌ಗೆ ಆಯ್ಕೆಯಾಗಿರುವ ವರದಿ ಪ್ರಕಟಿಸಲು ಹೆಮ್ಮೆ ಇದೆ. ಅವರಿಗೆ ಅಭಿನಂದನೆಗಳು

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ರಮ್ಯ(ಶಿಶುಮಂದಿರ)
ಮಾಲತಿ(ಪ್ರಾಥಮಿಕ ಶಾಲೆ)
ನಿಕ್ಷಿತಾ (ಪ್ರೌಢಶಾಲೆ)
ದೀಪಿಕಾ (ಪಿಯುಸಿ)
ಅನನ್ಯ (ಪದವಿ)
ಉಷಾ(ಇಂಗ್ಲೀಷ್ ಮೀಡಿಯಂ ಸ್ಕೂಲ್)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಚೂರು


**ಇಂಗ್ಲೀಷ್ ಕಾರ್ಯಾಗಾರ :**
**18–05–2026 ರಿಂದ 23–05–2026**

ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್‌ನ ವಿಶ್ವೇಶ್ವರ ಸಭಾಂಗಣದಲ್ಲಿ ಆಂಗ್ಲ ಭಾಷಾ ವಿಷಯ ಕಾರ್ಯಾಗಾರ ಮೇ 18 ರಿಂದ ಮೇ 23ರವರೆಗೆ ನಡೆಯಿತು. ಬೆಂಗಳೂರು ರಿಜಿನಲ್ ಇನ್ಸ್ಟಟ್ಯೂಟ್ ಆಫ್ ಸೌತ್ ರಿಜಿಯನ್ ಅವರು ಕಾರ್ಯಾಗಾರವನ್ನು ನಡೆಸಿಕೊಟ್ಟರು. ಪ್ರಾಥಮಿಕ ವಿಭಾಗದಿಂದ ರಾಜೇಶ್ವರಿ ಮಾತಾಜಿ, ಚಂದ್ರಾವತಿ ಮಾತಾಜಿ, ದಿವ್ಯ ಮಾತಾಜಿ, ಕುಸುಮ ಮಾತಾಜಿ, ನಳಿನಾಕ್ಷಿ ಮಾತಾಜಿ, ಪ್ರೌಢಶಾಲೆಯ ಶಿಕ್ಷಕರಾಗಿರುವ ಶ್ರೀಮತಿ ದೀಕ್ಷಾ, ಶ್ರೀಮತಿ ಅನ್ವಿತಾ ಮೇಘಶ್ರೀ ಕೆ ಪಿ ಹಾಗೂ ಸುಮಿತ್ ಶ್ರೀಮಾನ್ ಭಾಗವಹಿಸಿದರು.

**ವಾರ್ಷಿಕ ಪರ್ವ : 21–05–2026**

ವಿದ್ಯಾಕೇಂದ್ರದ ನಾಗರಕೇಶ್ವರಿ ಸಾನಿಧ್ಯದಲ್ಲಿ ವಾರ್ಷಿಕ ಪರ್ವ ನೆರವೇರಿತು. ಹಿರಿಯರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಡಾ। ಕಮಲಾ ಪ್ರಭಾಕರ ಭಟ್ ಆಡಳಿತ ಮಂಡಳಿಯವರು, ವಿಭಾಗ ಪ್ರಮುಖರು, ಬೋಧಕ, ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ವಿವೇಕಾನಂದ ಕನ್ನಡ ಕಾರ್ಯಾಗಾರ :**
**26–05–2026 ರಿಂದ 27–05–2026**

ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್‌ನ ವಿಶ್ವೇಶ್ವರ ಸಭಾಂಗಣದಲ್ಲಿ ಕನ್ನಡ ಭಾಷಾ ವಿಷಯ ಕಾರ್ಯಾಗಾರ ಮೇ 26 ರಿಂದ ಮೇ 27ರವರೆಗೆ ನಡೆಯಿತು. ಪ್ರಾಥಮಿಕ ವಿಭಾಗದಿಂದ ಒಟ್ಟು 18 ಅಧ್ಯಾಪಕರು ಭಾಗವಹಿಸಿದರು.

**ಸಂಸ್ಕೃತ ಕಾರ್ಯಾಗಾರ: 29.5.26**

ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್‌ನ ವಿಶ್ವೇಶ್ವರ ಸಭಾಂಗಣದಲ್ಲಿ ಕನ್ನಡ ಭಾಷಾ ವಿಷಯ ಕಾರ್ಯಾಗಾರ 29–05–2026ರಂದು ನಡೆಯಿತು. ಪ್ರಾಥಮಿಕ ವಿಭಾಗದ ಅನ್ನಪೂರ್ಣ ಮಾತಾಜಿ, ದೇವಿಕಾ ಮಾತಾಜಿ ಭಾಗವಹಿಸಿರು.

**ಅಧ್ಯಾಪಕರ ಬೈಠಕ್ : 29–05–2026**



2026–27ನೇ ಶೈಕ್ಷಣಿಕ ವರ್ಷದ ಮೊದಲ ಅಧ್ಯಾಪಕರ ಬೈಠಕ್ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಅವರ ಮಾರ್ಗದರ್ಶನದಲ್ಲಿ ನಡೆಯಿತು. ಈ ಬೈಠಕ್‌ನಲ್ಲಿ ತರಗತಿ ಹಂಚಿಕೆ ಹಾಗೂ ಜವಾಬ್ದಾರಿ ಹಂಚಿಕೆ ನಡೆಯಿತು.

**ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರ**

ಸಂಸ್ಕಾರ ಕಾರ್ಯಾಗಾರ ದಿನಾಂಕ 20– 5–2026 ರಿಂದ 21– 5–26 ರವರೆಗೆ ಸಂಸ್ಕಾರ ಕಾರ್ಯಗಾರವು ವಿವೇಕಾನಂದ ವಸತಿ ನಿಲಯದಲ್ಲಿ ನಡೆಯಿತು. ಕಾರ್ಯಾಗಾರದಲ್ಲಿ ಪ್ರೌಢಶಾಲೆಯ ಶಿಕ್ಷಕರಾಗಿರುವ ಶ್ರೀಮತಿ ಸೌಮ್ಯ ಬಿ ಮತ್ತು ಶ್ರೀಮತಿ ಮಲ್ಲಿಕಾ, ಶ್ರೀಮತಿ ಗಾಯತ್ರಿ ಭಾಗವಹಿಸಿದರು.

**ಕನ್ನಡ ಭಾಷಾ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರ**

ಕನ್ನಡ ಭಾಷಾ ಶಿಕ್ಷಕರ ಪುನಶ್ಚೇತನ ಕಾರ್ಯಗಾರ ದಿನಾಂಕ 26–5–2026 ರಿಂದ 27–5–26 ರವರೆಗೆ ಕನ್ನಡ ವಿಷಯದ ಕಾರ್ಯಗಾರವು ಯಶಸ್ ಸಭಾಂಗಣ ವಿವೇಕಾನಂದ ಕಾಲೇಜು ಆವರಣದಲ್ಲಿ ನಡೆಯಿತು. ಕಾರ್ಯಾಗಾರದಲ್ಲಿ ಪ್ರೌಢಶಾಲೆಯ ಶಿಕ್ಷಕರಾಗಿರುವ ಶ್ರೀಮತಿ ದೀಪಿಕಾ ಡಿ ಭಾಗವಹಿಸಿದರು.

**ಸಂಸ್ಕೃತ ಕಾರ್ಯಾಗಾರ** 29–5–2026

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ಪುತ್ತೂರಿನಲ್ಲಿ ನಡೆದ ಸಂಸ್ಕೃತ ವಿಷಯದ ಕಾರ್ಯಗಾರದಲ್ಲಿ ಪ್ರೌಢಶಾಲೆಯ ಶಿಕ್ಷಕರಾಗಿರುವ ಕುಮಾರಿ ದೀಕ್ಷಿತ ಮತ್ತು ಜಯರಾಮ್ ಶ್ರೀಮಾನ್ ಭಾಗವಹಿಸಿದರು.

**ವಿದ್ಯಾಕೇಂದ್ರದ ಯೋಜನಾ ಬೈಠಕ್:29.05.2026**



2026–27ನೇ ಶೈಕ್ಷಣಿಕ ವರ್ಷದ ವಿದ್ಯಾಕೇಂದ್ರದ ಎಲ್ಲಾ ಅಧ್ಯಾಪಕರ ವಿಶೇಷ ಬೈಠಕ್ ಮಧುಕರದಲ್ಲಿ ನಡೆಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಮೊದಲ ಹಂತದಲ್ಲಿ ಶ್ರೀರಾಮ ವಿದ್ಯಾಕೇಂದ್ರ ಬೆಳೆದು ಬಂದ ದಾರಿ ಹಾಗೂ ಅಡೆತಡೆಗಳು ಮತ್ತು ಬೆಳವಣಿಗೆಯ ಹಂತಗಳನ್ನು ವಿವರಿಸಿದರು.

ಎರಡನೆಯ ಅವಧಿಯಲ್ಲಿ ವಿದ್ಯಾಕೇಂದ್ರದ ಸಂಚಾಲಕರಾಗಿರುವ ಶ್ರೀ ವಸಂತ ಮಾಧವ ಶ್ರೀಮಾನ್ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲು, ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರತೆಗೆಯುವ ಪ್ರಯತ್ನಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದರು. ಸಿ.ಇ.ಓ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಸಭೆಯನ್ನು ನಿರ್ವಹಣೆ ಮಾಡಿದರು.

**ಎಸ್.ಎಸ್.ಎಲ್.ಸಿ ಪರೀಕ್ಷೆ – 2 ಫಲಿತಾಂಶ**

ಎಸ್‌ಎಸ್‌ಎಲ್.ಸಿ ಪರೀಕ್ಷೆ–2ರಲ್ಲಿ ಶ್ರೀರಾಮ ಪ್ರೌಢಶಾಲೆಯ ಎರಡು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು 2025–26ನೇ ಸಾಲಿನಲ್ಲಿ 272 ವಿದ್ಯಾರ್ಥಿಗಳಲ್ಲಿ 268 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಒಟ್ಟು ಫಲಿತಾಂಶ 98.52%

ಶ್ರೀರಾಮ ಇಂಗ್ಲೀಷ್ ಮೀಡಿಯಂ ಸ್ಕೂಲ್ 2025–26ನೇ ಶೈಕ್ಷಣಿಕ ವರ್ಷದಲ್ಲಿ ಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 100 ಶೇಕಡಾ ಫಲಿತಾಂಶವನ್ನು ಪಡೆದುಕೊಂಡದ್ದಕ್ಕಾಗಿ ಶಿಕ್ಷಣ ಇಲಾಖೆ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಿತ್ತು.

**ಕನ್ನಡ ಕಾರ್ಯಗಾರದಲ್ಲಿ ಭಾಗಿ**

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ನಡೆದ ಕನ್ನಡ ಭಾಷಾ ಶಿಕ್ಷಕರ ಪುನಶ್ಚೇತನ ಕಾರ್ಯಗಾರದಲ್ಲಿ ಶ್ರೀಮತಿ ದೀಕ್ಷಿತಾ ಮಾತಾಜಿ ಯವರು ಭಾಗವಹಿಸಿದರು.

**ಕಾರ್ಯಾಗಾರ 20/5/2026 ಮತ್ತು 21/5/2026**

ವಿವೇಕಾನಂದ ಮಹಾವಿದ್ಯಾಲಯದ ಪುತ್ತೂರು ವಸತಿ ನಿಲಯದಲ್ಲಿ ನಡೆದ 2026–27 ಶೈಕ್ಷಣಿಕ ವರ್ಷದ ಎರಡು ದಿನದ ಸಂಸ್ಕಾರ ಪ್ರಶಿಕ್ಷಣ ವರ್ಗದಲ್ಲಿ ಉಪನ್ಯಾಸಕರಾದ ಶ್ರೀಮತಿ ದೀಪಿಕಾ ಮತ್ತು ಶ್ರೀಮತಿ ಅಶ್ವಿನಿ ಭಾಗವಹಿಸಿರುತ್ತಾರೆ

**ದ್ವಿತೀಯ ಪಿಯುಸಿ ಪರೀಕ್ಷೆ2ರ ಫಲಿತಾಂಶ**

ದ್ವಿತೀಯ ಪಿಯುಸಿ ಪರೀಕ್ಷೆ 2ರ ಫಲಿತಾಂಶದಲ್ಲಿ ಕಲಾ ವಿಭಾಗವು 100 ಶೇಕಡಾ, ವಾಣಿಜ್ಯ ವಿಭಾಗವು 98 ಶೇಕಡಾ ಹಾಗೂ ವಿಜ್ಞಾನ ವಿಭಾಗವು 98 ಶೇಕಡಾ ಫಲಿತಾಂಶ ದಾಖಲಿಸಿದ್ದು, ಕಾಲೇಜಿನ ಒಟ್ಟು ಫಲಿತಾಂಶವು 98 ಶೇಕಡಾವಾಗಿದೆ.

**ದ್ವಿತೀಯ ಪಿಯುಸಿ ತರಗತಿ ಪ್ರಾರಂಭ 22.5.26**

ದ್ವಿತೀಯ ಪಿಯುಸಿ ತರಗತಿಗಳು ಪ್ರಾರಂಭದಂದು ಮಾತಾಜಿಗಳು ವಿದ್ಯಾರ್ಥಿಗಳಿಗೆ ಆರತಿ ಬೆಳಗಿ, ತಿಲಕವಿಟ್ಟು ಸ್ವಾಗತಿಸಿದರು. ಪ್ರಥಮದರ್ಜೆ ಮಹಾವಿದ್ಯಾಲಯದ ಉಪಪ್ರಾಂಶುಪಾಲರು ಶ್ರೀ ಯತಿರಾಜ್ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ದೀಪ ಪ್ರಜ್ವಲಿಸಿದರು. . ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಹಾಗೂ ಎಲ್ಲಾ ಉಪನ್ಯಾಸಕ ಮತ್ತು ಉಪನ್ಯಾಸಕೇತರರು ಉಪಸ್ಥಿತರಿದ್ದರು.

**ಪ್ರಥಮ ಪಿಯುಸಿ ತರಗತಿ ಪ್ರಾರಂಭ 25.5.26**

ಶ್ರೀರಾಮ ಪ್ರೌಢಶಾಲೆಯ ಅತ್ಯಧಿಕ ಅಂಕವನ್ನು ಪಡೆದಿರುವ ಕುಮಾರಿ ಪ್ರಗತಿ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ದೀಪ ಪ್ರಜ್ವಲಿಸಿದರು. ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿದ ಬಳಿಕ ಮಾತಾಜಿಗಳು ವಿದ್ಯಾರ್ಥಿಗಳಿಗೆ ಆರತಿ ಬೆಳಗಿ, ತಿಲಕವಿಟ್ಟು ಶುಭ ಹಾರೈಸಿದರು. ಪ್ರಾಂಶುಪಾಲರು, ಎಲ್ಲಾ ಉಪನ್ಯಾಸಕ ಮತ್ತು ಉಪನ್ಯಾಸಕೇತರರು ಉಪಸ್ಥಿತರಿದ್ದರು.

**ಇತಿಹಾಸ ವಿಭಾಗದ ವತಿಯಿಂದ ಉಪನ್ಯಾಸ ಕಾರ್ಯಕ್ರಮ;**

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಇತಿಹಾಸ ವಿಭಾಗದ ವತಿಯಿಂದ IQAC ಸಹಯೋಗದಲ್ಲಿ ದಿನಾಂಕ 06.05.2026 ರಂದು "History Shaping Responsible citizens " ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ Dubai Indian college ಇತಿಹಾಸ ಉಪನ್ಯಾಸಕಿ ಶ್ರೀಮತಿ ಭಾರತಿ ವಸಂತ್ ಕುಮಾರ್ ಇವರು ಮಾತನಾಡುತಾ, ಪ್ರತಿಯೊಬ್ಬರೂ ತಮ್ಮ ಗುರಿ ಸೇರಿ ಯಶಸ್ವಿಯಾಗಲು ನೈತಿಕ ಮೌಲ್ಯಗಳು ತಳಹದಿಯಂತೆ ಇರುತ್ತವೆ ಎಂದರು. ಛತ್ರಪತಿ ಶಿವಾಜಿ ಜಯಂತಿಯ ಪ್ರಯುಕ್ತ ನಡೆದ ಕ್ವಿಜ್ ಸ್ಪರ್ಧೆಯ ಬಹುಮಾನಗಳನ್ನು ವಿತರಿಸಲಾಯಿತು. ಪ್ರಥಮ ಬಹುಮಾನ: ಕವಿತಾ (IIIBA), ದ್ವಿತೀಯ ಬಹುಮಾನ: ಮಾನಸ (IBA)& ಜಯಸೂರ್ಯ(IIBCA), ತೃತೀಯ ಬಹುಮಾನ: ಜಯಶ್ರೀ (IBCA), ಸ್ತುತಿ(IBA), ಸಾಧ್ವಿ(IIIBA) , ವೇದಿಕೆಯಲ್ಲಿ ಬಿಎ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಜಯಲಕ್ಷ್ಮಿ ಮಾತಾಜಿ, ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಆಶಾಲತಾ ಮಾತಾಜಿ ಇವರು ಉಪಸ್ಥಿತರಿದ್ದರು.

**ಫ್ಯಾಕಲ್ಟಿ ಡೆವಲಪ್ಮೆಂಟ್ ಪ್ರೋಗ್ರಾಂ** 13.5.2026



“ಪಾಠಪುಸ್ತಕದಾಚೆಗೆ  ಪರಿಣಾಮಕಾರಿ ಬೋಧನೆಯ ಮನೋವಿಜ್ಞಾನ” ವಿಷಯದ ಕುರಿತು ಫ್ಯಾಕಲ್ಟಿ ಡೆವಲಪ್ಮೆಂಟ್ ಪ್ರೋಗ್ರಾಂ (FDP) ಯಶಸ್ವಿಯಾಗಿ ನಡೆಯಿತು. ಬೋಧನೆ ಮತ್ತು ಅಧ್ಯಯನದ ಮನೋವೈಜ್ಞಾನಿಕ ಅಂಶಗಳನ್ನು ಕೇಂದ್ರೀಕರಿಸಿ ಉಪನ್ಯಾಸಕರ ಬೋಧನಾ ಪರಿಣಾಮಕಾರಿತ್ವವನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಚಂದ್ರಕಾಂತ್ ಗೋರೆ ಭಾಗವಹಿಸಿದ್ದರು.

**ವಿದ್ಯಾರ್ಥಿಗಳು PGCET ಕಾರ್ಯಾಗಾರದಲ್ಲಿ;**



2026ರ ಮೇ 16ರಂದು ಪದವಿ ಕಾಲೇಜಿನ ಬಿಕಾಂ ವಿಭಾಗದ 12 ವಿದ್ಯಾರ್ಥಿಗಳು ಮಂಗಳೂರಿನ Sridevi Collegeನ ಒಂದು ದಿನದ PGCET ಕಾರ್ಯಾಗಾರದಲ್ಲಿ ಭಾಗವಹಿಸಿದರು. ಈ ಕಾರ್ಯಾಗಾರವನ್ನು ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಕರ್ನಾಟಕ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆ (PGCET) ಕುರಿತು ಹಾಗೂ MBA, MCA ಮತ್ತು MCom ಪ್ರವೇಶಗಳ ಬಗ್ಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ಆಯೋಜಿಸಲಾಗಿತ್ತು.

**ಇತಿಹಾಸ "ಮಿನಿಪ್ರಾಜೆಕ್ಟ್ ವೈವಾ** 18.05.2025




ಪ್ರಥಮ ದರ್ಜೆ ಕಾಲೇಜಿನ ಕಲಾ ವಿಭಾಗದ ಇತಿಹಾಸ ವಿದ್ಯಾರ್ಥಿಗಳಿಗೆ **"Mini Project Viva"** ನಡೆಸಲಾಯಿತು. ಈ Vivaವನ್ನು 'ದುಬೈ ಇಂಡಿಯನ್ ಕಾಲೇಜಿನ' ಇತಿಹಾಸ ಉಪನ್ಯಾಸಕಿ ಶ್ರೀಮತಿ ಭಾರತಿ ವಸಂತ್ ಕುಮಾರ್ ಇವರು ನಡೆಸಿಕೊಟ್ಟರು.

**ರಾಜ್ಯಶಾಸ್ತ್ರ ಮಿನಿ ಪ್ರಾಜೆಕ್ಟ್ ವೈವಾ ವರದಿ;**




ಕಾಲೇಜಿನ ಕಲಾ ವಿಭಾಗದ ರಾಜ್ಯಶಾಸ್ತ್ರ ವಿಭಾಗವು ರಾಜ್ಯಶಾಸ್ತ್ರ ವಿದ್ಯಾರ್ಥಿಗಳಿಗಾಗಿ 20/05/2024 ರಂದು ಮಿನಿ ಪ್ರಾಜೆಕ್ಟ್ ವೈವಾ ಕಾರ್ಯಕ್ರಮವನ್ನು ಆಯೋಜಿಸಿತು. ಈ ಕಾರ್ಯಕ್ರಮವು ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕಿ ಜಯಲಕ್ಷ್ಮಿ ಕೆ ಅವರ ಮಾರ್ಗದರ್ಶನದಲ್ಲಿ ನಡೆಯಿತು.ವೈವಾ ಪರೀಕ್ಷೆಯನ್ನು ಶ್ರೀ ರಾಮ ಪಿಯು ಕಾಲೇಜು, ಕಲ್ಲಡ್ಕದ ಪ್ರಾಂಶುಪಾಲರಾದ ಶ್ರೀ ವಸಂತ

ಬಲ್ಲಾಳ್ ಅವರು ನಡೆಸಿಕೊಟ್ಟರು. ಪರೀಕ್ಷಕರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅವರ ವಿಷಯದ ಅರಿವು, ಪ್ರಸ್ತುತಿಕರಣ ಕೌಶಲ್ಯ ಮತ್ತು ಜ್ಞಾನವನ್ನು ಮೌಲ್ಯಮಾಪನ ಮಾಡಿದರು.

**ವಾಣಿಜ್ಯ ವಿಭಾಗದ ಮಿನಿ ಪ್ರಾಜೆಕ್ಟ್ ವೈವಾ**



ವಾಣಿಜ್ಯ ವಿಭಾಗವು ದ್ವಿತೀಯ ವರ್ಷದ ಹಾಗೂ ಅಂತಿಮ ವರ್ಷದ ಬಿ.ಕಾಂ. ವಿದ್ಯಾರ್ಥಿಗಳಿಗಾಗಿ ನಡೆದ ಪರೀಕ್ಷೆಗೆ ಬಾಹ್ಯ ಪರೀಕ್ಷಕರಾಗಿ ಮೂಡಬಿದ್ರೆಯ ಆಳ್ವಾಸ್ ಕಾಲೇಜಿನ ವಾಣಿಜ್ಯ ವೃತ್ತಿಪರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಅಪರ್ಣಾ ಕೆ. ಹಾಗೂ ಮಂಗಳೂರಿನ ಎ.ಜೆ. ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್‌ನ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಭವ್ಯಶ್ರೀ ಬಿ. ಅವರು ಆಗಮಿಸಿದ್ದರು. ಪರೀಕ್ಷಕರು ವಿದ್ಯಾರ್ಥಿಗಳ ಸಿದ್ಧತೆ, ಆತ್ಮವಿಶ್ವಾಸ ಮತ್ತು ವಿಭಾಗದ ಶೈಕ್ಷಣಿಕ ಗುಣಮಟ್ಟವನ್ನು ಮೆಚ್ಚುಗೆ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರ ಸಕ್ರಿಯ ಭಾಗವಹಿಸುವಿಕೆಯಿಂದ ವೈವಾ ವೋಸ್ ಪರೀಕ್ಷೆಯು ಯಶಸ್ವಿಯಾಗಿ ನಡೆಯಿತು.

**ಅರ್ಥಶಾಸ್ತ್ರ ಮಿನಿಪ್ರಾಜೆಕ್ಟ್ ವೈವಾ** 20.05.2026


ಶ್ರೀರಾಮ ಪ್ರಥಮದರ್ಜೆ ಕಾಲೇಜು, ಕಲ್ಲಡ್ಕದ ಕಲಾ ವಿಭಾಗದ ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗಾಗಿ ಮಿನಿ ಪ್ರಾಜೆಕ್ಟ್ ವೈವಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ವೈವಾವನ್ನು ಶ್ರೀರಾಮ ಪದವಿಪೂರ್ವ ಕಾಲೇಜು, ಕಲ್ಲಡ್ಕದ ಅರ್ಥಶಾಸ್ತ್ರ ಉಪನ್ಯಾಸಕಿ ಶ್ರೀಮತಿ ನಯನಾ ಮಾತಾಜಿ ಅವರು ನಡೆಸಿಕೊಟ್ಟರು. ಅರ್ಥಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಸಂಧ್ಯಾ ಮಾತಾಜಿ ಉಪಸ್ಥಿತರಿದ್ದರು.

**ರಾಜ್ಯಶಾಸ್ತ್ರ ವಿಭಾಗದ ಮಿನಿ ಪ್ರಾಜೆಕ್ಟ್ ವೈವಾ**

ರಾಜ್ಯಶಾಸ್ತ್ರ ವಿಭಾಗದಲ್ಲಿ ದ್ವಿತೀಯ ಬಿ.ಎ. ವಿದ್ಯಾರ್ಥಿಗಳ ವೈವಾ ವೋಸ್ (ಮೌಖಿಕ) ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಬಾಹ್ಯ ಪರೀಕ್ಷಕರಾಗಿ ಶ್ರೀ ವಸಂತ ಬಳ್ಳಾಲ್ ಅವರು ಆಗಮಿಸಿದ ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಜಯಲಕ್ಷ್ಮಿ ಕೆ. ಹಾಗೂ ಆಂತರಿಕ ಮಾರ್ಗದರ್ಶಕರಾದ ಅಕ್ಷತಾ ಅವರು ಉಪಸ್ಥಿತರಿದ್ದರು. ಬಾಹ್ಯ ಪರೀಕ್ಷಕರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅವರ ಶೈಕ್ಷಣಿಕ ಪ್ರಗತಿಗಾಗಿ ಅಮೂಲ್ಯ ಸಲಹೆಗಳನ್ನು ನೀಡಿದರು. ಆಂತರಿಕ ಮಾರ್ಗದರ್ಶಕರು ಪರೀಕ್ಷೆಯ ಅವಧಿಯುದ್ದಕ್ಕೂ ವಿದ್ಯಾರ್ಥಿಗಳಿಗೆ ಅಗತ್ಯವಾದ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡಿದರು. ಒಟ್ಟಾರೆಯಾಗಿ, ವೈವಾ ವೋಸ್ ಪರೀಕ್ಷೆಯು ಯಶಸ್ವಿಯಾಗಿ ಹಾಗೂ ಪರಿಣಾಮಕಾರಿಯಾಗಿ ನಡೆಯಿತು. ಇದು ವಿದ್ಯಾರ್ಥಿಗಳ ಜ್ಞಾನ, ಆತ್ಮವಿಶ್ವಾಸ ಮತ್ತು ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿಯಾಯಿತು.



CATC /IGC/NSC ಶಿಬಿರ: ಉಡುಪಿಯ ಉದ್ಯಾವರದಲ್ಲಿ ದಿನಾಂಕ 20.05.2026 ರಿಂದ 30.5.2026 ರವರೆಗೆ ನಡೆದ ಎನ್ ಸಿಸಿ ಶಿಬಿರದಲ್ಲಿ ಶ್ರೀರಾಮ ಪ್ರೌಢಶಾಲೆಯ 49 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಭಾರತೀಯ ಸೇನೆಯು ನಡೆಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅಗ್ನಿವೀರ್‌ಗೆ ಆಯ್ಕೆಯಾದ ಶ್ರೀರಾಮ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಶಿವಲಿಂಗ ಮತ್ತು ಜಿತೇಂದ್ರ ಇವರಿಗೆ ಶ್ರೀರಾಮ ವಿದ್ಯಾಕೇಂದ್ರದ ವತಿಯಿಂದ ಅಭಿನಂದನೆಗಳು.


ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 8147249173

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

ಚಿನ್ನಾಭರಣ ಸಾಲ – 11%
ಜಾಮೀನು ಸಾಲ – 16.5%
ಅಡವು ಸಾಲ – 13.5%
ವಾಹನ ಸಾಲ – 12%
ಗೃಹ ನಿರ್ಮಾಣ ಸಾಲ – 11.5%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

91ದಿನಗಳವರೆಗೆ – 7%
92ರಿಂದ 181 ದಿನಗಳು – 7.5%
182 ರಿಂದ 364 ದಿನಗಳು – 8.5%
1 ವರ್ಷ ಮತ್ತು ಮೇಲ್ಪಟ್ಟು – 9.5%

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2025-27 Licensed to Post without pre-payment License No: SK/WPP/PTR/117/2025-27

KARKAN/2014/62363
Posted at Kalladka P.O. on 10th and 15th of Every month

Vol. : 13 Issue :1 Rs. 10/-

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in, www.srvk.org
E-mail : sriramakalladka@gmail.com

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363